ಹೂವು ಕೊಯ್ದ ನಂತರ ಅವುಗಳನ್ನು ಸುಂದರವಾಗಿ ಮಾಲೆ ಕಟ್ಟುವುದೇ ಸೊಗಸು. ಅಬ್ಬಲಿಗೆ(ಕನಕಾಂಬರ), ಗೊರಟೆ(ಸ್ಫಟಿಕದ ಹೂ), ಮಲ್ಲಿಗೆ(ಕಾಕಡ, ದುಂಡುಮಲ್ಲಿಗೆ, ಸೂಜಿಮಲ್ಲಿಗೆ ಇತ್ಯಾದಿ), ಸೇವಂತಿಗೆ ಮುಂತಾದ ದಂಡೆ ಕಟ್ಟಲು ಬರುವಂತಹ ಹೂಗಳನ್ನು ಅತಿ ನಾಜೂಕಿನಿಂದ ಕೈಯಲ್ಲಿ ಹಿಡಿದು ತೊಟ್ಟು ಮುರಿದುಹೋಗದಂತೆ ಎರಡು ಹೂಗಳನ್ನು ಎದುರುಬದುರಾಗಿ ಜೋಡಿಸಿ ದಾರ ಸುತ್ತಿ ಗಂಟು ಹಾಕುವುದು, ಮತ್ತೆ ಅದೇ ಪುನರಾವರ್ತನೆ. ಮಧ್ಯೆ ಮಧ್ಯೆ ಧವನ, ಪಂಚಪತ್ರೆ ಎಲೆಗಳನ್ನು ಸೇರಿಸಿ ಕಟ್ಟಿದಾಗ ಅಥವಾ ಬೇರೆ ಬೇರೆ ಬಣ್ಣದ ಹೂಗಳನ್ನು ಮಧ್ಯೆ ಸೇರಿಸಿ ಕಟ್ಟಿದಾಗ ಆ ಹೂಮಾಲೆಯ ಅಂದ ಇನ್ನೂ ಹೆಚ್ಚುವುದು. ಮೊದಮೊದಲು ಹೂ ಕಟ್ಟುವುದನ್ನು ಕಲಿಯುವಾಗ ಪಾಡು ಪಡುತ್ತಿದ್ದೆವು. ಹೂವಿನ ತೊಟ್ಟನ್ನು ದಾರದಿಂದ ಬಿಗಿಯಾಗಿ ಸುತ್ತಿದರೆ ತೊಟ್ಟು ಮುರಿದು ಹೂವು ಉದುರಿಹೋಗುತ್ತಿತ್ತು. ಅಥವಾ ನಾವು ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದ ಹೂವುಗಳು ಕ್ಷಣ ಹೊತ್ತಿನಲ್ಲೇ ಬಾಡಿ ಅಪ್ಪಚ್ಚಿಯಂತಾಗಿ ನಸುಕಂದು ಬಣ್ಣಕ್ಕೆ ತಿರುಗಿರುತ್ತಿದ್ದವು. ಆಗ ಬಾಡಿಹೋದ ಆ ಹೂವಿನಂತೆಯೇ ನಮ್ಮ ಮುಖವೂ ಸಣ್ಣದಾಗುತ್ತಿತ್ತು. ನಮಗೆ ಹೂವು ಕಟ್ಟಲು ಬರುವುದೇ ಇಲ್ಲವೇನೋ, ಅಥವಾ ಹೂವು ಕಟ್ಟುವುದನ್ನು ಕಲಿಯಲು ಎಷ್ಟು ವರ್ಷ ಬೇಕೇನೋ ಎಂದು ಅನಿಸುತ್ತಿತ್ತು. ಚಿಕ್ಕವರಾದ ನಮಗೆ ಅವುಗಳನ್ನು ಕೈಯಲ್ಲಿ ಜೋಡಿಸಿ ಹಿಡಿದು ದಾರ ಸುತ್ತುವುದೇ ಒಂದು ದೊಡ್ಡ ಸಾಧನೆ ಎನಿಸುತ್ತಿತ್ತು. ಆದರೂ ಕಷ್ಟಪಟ್ಟು ಒಂದು ಗೇಣು (ಕನಿಷ್ಠ ಮೊಳ ಕೂಡ ಅಲ್ಲ!) ಹೂವಿನ ಮಾಲೆ ಕಟ್ಟಿ ಅದನ್ನು ಹಿಡಿದು ನೋಡಿದಾಗ ಕಣ್ಣುಗಳಲ್ಲಿ ಹಿರಿಹಿರಿ ಹಿಗ್ಗಿನ ಬೆಳಕು! ನನ್ನ ದೊಡ್ಡಮ್ಮ ಹೂ ಕಟ್ಟುವುದನ್ನು ಹೇಳಿಕೊಡುವಾಗ ಅದರ ಜೊತೆಗೆ ಸಂಸಾರದ ಸಾರವನ್ನೂ ಜೋಡಿಸಿ ಕಟ್ಟಿ ಹೇಳುತ್ತಿದ್ದರು – "ಸಂಸಾರ ಅನ್ನೋದು ಈ ಹೂವಿನ ಮಾಲೆಯ ಹಾಗೇ ಕಣ್ರೋ. ದಾರವನ್ನು ಬಿಗಿಯಾಗಿ ಹಿಡಿದು ಸುತ್ತಿದರೆ ಹೂವು ಹಾಳಾಗುತ್ತದೆ. ಹಾಗೇ ಹಟ, ಸಿಟ್ಟು, ಅಸಹನೆ ಇದ್ರೆ ಮಲ್ಲಿಗೆಯಂತ ಬಾಳು ಹಿಸುಕಿ ಹೋಗಿ ಹಾಳಾಗುತ್ತೆ. ನಾಜೂಕಿನಿಂದ ಹೂವು ಬಾಡದಂತೆ ಮಾಲೆ ಕಟ್ಟುವ ಹಾಗೇ ಸಂಸಾರವನ್ನೂ ನಾಜೂಕಿನಿಂದ ನಿಭಾಯಿಸ್ಬೇಕು. ಮಧ್ಯೆ ಮಧ್ಯೆ ಈ ಪತ್ರೆ, ಧವನವನ್ನು ಹೊಂದಿಸಿ ಸೇರಿಸಿ ಕಟ್ಟುವ ಹೂವಿನ ಮಾಲೆ ಎಷ್ಟು ಚೆಂದ ಕಾಣುತ್ತೆ ಅಲ್ವಾ? ಹಾಗೇ ಜೀವನಾನೂ ಚೆಂದಾಗಿ ನಡೀಬೇಕು ಅಂದ್ರೆ ಸರಸ ವಿರಸ ಜೊತೆಜೊತೆಯಾಗಿ ಇರ್ಬೇಕು. ಅಲ್ದೇ ಹೊಂದ್ಕೊಂಡು ಹೋಗೋ ಗುಣಾನೂ ಇರ್ಬೇಕು". ಹಿರಿಯರ ಇಂತಹ ಒಳ್ಳೆಯ ಮಾತುಗಳು ಆಗ ಅಷ್ಟೇನೂ ತಲೆ ಬುರುಡೆಯ ಒಳಗೆ ಹೋಗುತ್ತಿರಲಿಲ್ಲವಾದರೂ, ಸಂಸಾರ ಕಟ್ಟಿಕೊಂಡ ನಂತರ ಅನುಭವಕ್ಕೆ ಬರತೊಡಗಿದವು.

ಹಿಂದಿನ ಕಾಲದಲ್ಲಿ ಹತ್ತಿಯ ದಾರಕ್ಕೆ ಬೆಲೆ ಜಾಸ್ತಿ ಇದ್ದುದರಿಂದ ಬಾಳೆಯ ದಿಂಡಿನ ನಾರನ್ನೇ ಹೂ ಕಟ್ಟಲು ಬಳಸುತ್ತಿದ್ದರು. ಬಾಳೆಯ ದಿಂಡಿನ ನಾರನ್ನು ನೀರಿನಲ್ಲಿ ನೆನೆಸಿಟ್ಟು ನಂತರ ತೆಗೆದು ಬಳಸುತ್ತಿದ್ದರು. ಈ ನಾರು ಗಟ್ಟಿಯಷ್ಟೇ ಅಲ್ಲದೆ ಬಹೂಪಯೋಗಿ ಕೂಡ. ಕೈಚೀಲದ ಬಾಯಿ ಬಿಗಿಯಲು, ಸೌತೆಕಾಯಿಗಳನ್ನು ಗಳಕ್ಕೆ ನೇತುಹಾಕಲು, ಭತ್ತದ ಮುಡಿ ಕಟ್ಟಲು, ಕೊನೆಗೆ ಹೆಂಗಸರ ಜಡೆ ತುದಿ ಕಟ್ಟಲೂ ಕೂಡ ಟೇಪಿನ ಬದಲು ಈ ಬಾಳೆ ನಾರು ಬಳಕೆಯಾಗುತ್ತಿತ್ತು. ದುಂಡಗೆ ಸುತ್ತಿಟ್ಟ ಬಾಳೆ ನಾರಿನ ಪಟ್ಟಿಯನ್ನು ಹಿಂದಿನ ಕಾಲದ ಬಹುತೇಕ ಎಲ್ಲಾ ಹಳ್ಳಿ ಮನೆಗಳಲ್ಲೂ ಕಾಣಬಹುದಿತ್ತು – ಮನೆ ಛಾವಣಿಯ ಸಂದಿಗಳಲ್ಲಿ, ನಾಗಂದಿಗೆಗಳಲ್ಲಿ, ಗೋಡೆಗೆ ಹೊಡೆದ ಮೊಳೆಗಳಲ್ಲಿ, ಚಿಕ್ಕಪುಟ್ಟ ಡಬ್ಬಿಗಳಲ್ಲಿ ಹೀಗೆ.